# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 258/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ರಾಜು | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಚನ್ನೆಗೌಡ | | 12.11.2024 |
| ವಯಸ್ಸು | ಃ 42 ವರ್ಷ | | |
| ವೃತ್ತಿ | ಃ ವ್ಯವಸಾಯ | ಪ್ರಾ.ಸಾ. | ಃ 09 |
| ವಾಸಸ್ಥಳ | ಃ ಕೆರೆತೋಣ್ಣುರು | ಚಾ.ಸಾ. | ಃ 10 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಮಮತಾ ಇವರ ಪರಿಚಯ ಇದೆ. ಮಮತಾ ಇವರು ಯಾರಿಗೋ ಸಾಲ ಕೊಟ್ಟಿದ್ದು ದಿಃ*24.05.2023* ರಂದು ಆ ಸಾಲ ವಾಪಸ್ಸು ಕೇಳಲು ಹೋದಾಗ ಹೊಡೆದು ಸಾಯಿಸಿದ್ದಾರೆ ಎಂದು ಮಾತನಾಡುತ್ತಿದ್ದು ಮರುದಿನ ಬೆಳಗ್ಗೆ ಅವರ ಶವ ನೋಡಲು ಮೈಸೂರಿನ ಕೆ.ಆರ್ ಆಸ್ಪತ್ರೆಯ ಬಳಿ ಇರುವ ಶವಾಗಾರಕ್ಕೆ ಹೋಗಿದ್ದೆ. ಆ ಕಾಲಕ್ಕೆ ಅವರ ಶವವನ್ನು ನೋಡಿದ್ದೆ ಅವರ ತಲೆಯ ಎಡ ಭಾಗಕ್ಕೆ ಕಿವಿಯಿಂದ ಮೇಲೆ ಆಳವಾದ ಗಾಯವಾಗಿತ್ತು. ಆಗ ಮೋಹನ್ ಕುಮಾರ್ ಎನ್ನುವವರು ಸಿದ್ದಲಿಂಗಪುರದ ಬಳಿ ಬೇಕರಿಯಲ್ಲಿ ಮಮತಾ ಇವರಿಗೆ ಹೊಡೆದಿದ್ದಾಗಿ ಹೇಳಿದ್ದರು. ಮಮತಾ ಇವರು ಸಾಲದ ಹಣ ವಾಪಸ್ಸು ಕೇಳಿದ್ದರಿಂದ ಆ ವ್ಯಕ್ತಿ ಅವರನ್ನು ಹೊಡೆದು ಸಾಯಿಸಿದ್ದಾಗಿ ಗೊತ್ತಾಗಿತ್ತು. ಆ ಕಾಲಕ್ಕೆ ಪೊಟೋಗಳನ್ನು ಸಹ ತೆಗೆದಿದ್ದರು. ಈಗ ನಾನು ನೋಡುತ್ತಿರುವ ಎಂ.ಒ–*1* ಮತ್ತು *2* ಆ ಕಾಲಕ್ಕೆ ಮಮತಾ ಇವರ ದೇಹದ ಮೇಲಿದ್ದ ಬಟ್ಟೆಗಳಿವೆ.

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಜೆ.ಪಿ ವಕೀಲರ ಪರವಾಗಿ ಶ್ರೀಮತಿ ಕೆ.ಎಂ.ಎಸ್ ರವರಿಂದಃ-</u>**

*2.* ಆ ದಿನ ನಾನು, ವಿಜಯಲಕ್ಷ್ಮಿ, ಕುಮಾರ್, ಸೋಮಶೇಖರ್ ಇನ್ನೂ ಸುಮಾರು ಜನ ಕೆ.ಆರ್.ಆಸ್ಪತ್ರೆಗೆ ಹೋಗಿದ್ದೆವು. ನನಗೆ ಶವ ಮಹಜರ್ ಕಾಲಕ್ಕೆ ಹಾಜರಿರುವಂತೆ ಪೋಲೀಸರು ನೋಟಿಸ್ ಕೊಟ್ಟಿರಲಿಲ್ಲ. ಶವ ಪಂಚನಾಮೆ ಗೆ ವಿಜಯಲಕ್ಷ್ಮಿ, ಕುಮಾರ್, ಸೋಮಶೇಖರ್ ಸಹಿ ಮಾಡಿದ್ದರು. ಬೆಳಗ್ಗೆ *10.30* ರಿಂದ *11* ಗಂಟೆ ವೇಳೆಯಲ್ಲಿ ಶವ ಪಂಚನಾಮೆ ಮಾಡಿದ್ದರು ಆದರೆ ನಿಖರವಾದ ಸಮಯ ಗೊತ್ತಿಲ್ಲ. ಶವ ಪಂಚನಾಮೆ ಮಾಡಿದ ಅಧಿಕಾರಿ ಹೆಸರು ಗೊತ್ತಿಲ್ಲ. ನಾನು ಶವ ಪಂಚನಾಮೆ ಕಾಲಕ್ಕೆ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೇ ಶವ ಪಂಚನಾಮೆಯನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಚಾ.ಸಾ–*1* ರಾಮೇಗೌಡ ನನ್ನ ಆತ್ಮೀಯರಿರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ- ಇಲ್ಲ.</u>**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು